

ಡಾ. ವಿ.ಎ. ಲಕ್ಷ್ಮಣ
ಕಲೆ: ರೂಪಶ್ರೀ ಕಲ್ಲಿಗನೂರು



# ಒಂದು ಉಕ್ಕಿನ ತುಂಡು

ಒಂದು ಉಕ್ಕಿನ
ತುಂಡು ಉಳಿಯಾಗಬಹುದಿತ್ತು
ಭೂಪಟವ ಹೊರುವ ಗೋಡೆಯ
ಮೊಳೆಯಾಗಬಹುದಿತ್ತು
ನೇಗಿಲ ತುದಿಯಾಗಿ ನೆಲವ ಉಳಬಹುದಿತ್ತು
ತರಿದ ಎದೆಗಳ ಹೊಲಿಯುವ
ಸೂಜಿಯಾಗಬಹುದಿತ್ತು
ದುರಂತ:
ಹರಿತ ಕತ್ತಿಯಾಯಿತು!
ಯಾರೋ ಮಾಡಿದವರು
ಯಾರೋ ಮಾರಿಕೊಂಡವರು
ಕೊಂದವರು ಯಾರೋ!?

ಒಂದು ಜೀವದ ಹರಣದ ಬದಲಿಗೆ
ಮತ್ತೊಂದ ಜೀವ ಮರಣ
ಅದಲು ಬದಲು ಅದು ಹೇಗೆ ಸಮ!
ಎಲ್ಲಿಯ ಲೆಕ್ಕಾಚಾರ ಯಾವ ಸಮೀಕರಣ?

ಸಿಡಿ ಮದ್ದು ಗುಂಡು ತುಪಾಕಿ
ಗಳ ಬೆಂಕಿ ಮಳೆಯಲಿ ಬೆಂದ
ಕೂಸಿನ ಶವಪೆಟ್ಟಿಗೆ ಅಬ್ಬಾ ಎಷ್ಟೊಂದು
ಭಾರ!